## ಕರ್ನಾಟಕ ಅರಣ್ಯ ಇಲಾಖೆ

### ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ ಪ್ರಾದೇಶಿಕ ಅರಣ್ಯ ವಿಭಾಗ, ವಿಜಯಪುರ

ಕೇಂದ್ರೀಯ ವಿದ್ಯಾಲಯ ಹಿಂದುಗಡೆ ವಿಜಯಪುರ-586101 08352-272165, 9449863575

ಫ್ಯಾಕ್ಸ-08352-272165 E-Mail: dcfbjp@gmail.com


ಕ್ರ.ಸಂ/ಬಿ2/ಉಅಸಂ/ವನ್ಯ ಜೀವಿ/ಸಿಆರ್-/2018-19. ದಿನಾಂಕ: 27-03-2019

**ವನ್ಯ ಜೀವಿಗಳ ಬೇಟೆಯಾಡುವುದು ಮತ್ತು ಗಿಡಮರಗಳನ್ನು ಅನಧೀಕೃತವಾಗಿ ಕಡಿಯುವುದನ್ನು ನಿಷೇಧಿಸಿದೆ.**

<><><><>

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಪ್ರತಿ ವರ್ಷ ಜರುಗುವ ಹೋಳಿ, ಯುಗಾದಿ ಹಾಗೂ ಕಾರ ಹುಣ್ಣಿಮೆ ಹಬ್ಬಗಳ ಆಚರಣೆ ಹಾಗೂ ಇನ್ನಿತರೆ ಯಾವುದೇ ಸಂದರ್ಭಗಳಲ್ಲಿ ಗ್ರಾಮ ಮತ್ತು ಹೋಬಳಿ ಪ್ರದೇಶಗಳಲ್ಲಿ ಸಾರ್ವಜನಿಕರು ವನ್ಯ ಜೀವಿಗಳಾದ ಜಿಂಕೆ, ಮೊಲ, ಕೌಜುಗ, ನವಿಲು, ಗೂಬೆ, ಬಳುವ ಮತ್ತು ಊಡಾ ಮುಂತಾದ ಯಾವುದೇ ಪ್ರಾಣಿ/ಪಕ್ಷಿಗಳ ಬೇಟೆಯಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ರೀತಿ ವನ್ಯ ಜೀವಿಗಳನ್ನು ಬೇಟೆಯಾಡುವುದು ಹಾಗೂ ಗಿಡಮರಗಳಿರುವ ಅರಣ್ಯ ಪ್ರದೇಶಗಳಲ್ಲಿ ಬೆಂಕಿಹಾಕುವ ಪ್ರಕರಣಗಳು ಕಂಡುಬರುತ್ತಿದ್ದು ಇವುಗಳೆಲ್ಲವೂ ಕಾನೂನು ರಿತ್ಯ ಶಿಕ್ಷಾರ್ಹ ಅಪರಾಧವಾಗಿದೆ. ಕಾರಣ ಯಾರೂ ಈ ರೀತಿಯ ಅಪರಾಧಗಳನ್ನು ಮಾಡದಂತೆ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಒಂದು ವೇಳೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ವನ್ಯ ಜೀವಿ ಸಂರಕ್ಷಣಾ ಕಾಯ್ದೆ 1972 ರಡಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಇಲಾಖಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದಲ್ಲದೇ ಅನಧಿಕೃತವಾಗಿ ಗಿಡಮರಗಳನ್ನು ಕಡಿದು ಸಾಗಾಣಿಕೆ ಮಾಡುತ್ತಿರುವ ಪ್ರಕರಣಗಳು ಕಂಡುಬರುತ್ತಿದ್ದು, ಈ ರೀತಿ ಗಿಡಮರಗಳನ್ನು ಕಡಿದು ಅನಧಿಕೃತವಾಗಿ ಸಾಗಾಣಿಕೆ ಮಾಡುವುದು ಕರ್ನಾಟಕ ಅರಣ್ಯ ಕಾಯ್ದೆ 1963 ರನ್ವಯ ದಂಡನಾರ್ಹವಾಗಿದೆ. ಪ್ರಸಕ್ತ ಇರುವ ಅರಣ್ಯ ಸಂಪತ್ತು ಸಂರಕ್ಷಣೆ ಮಾಡಿ ಪೋಷಿಸುವುದು ನಮ್ಮೆಲ್ಲರ ಜವಾಬ್ದಾರಿ ಹಾಗೂ ಆದ್ಯ ಕರ್ತವ್ಯ ಕೂಡ ಆಗಿರುತ್ತದೆ. ಆದ್ದರಿಂದ ನಾವೆಲ್ಲರೂ ವನ್ಯ ಜೀವಿ ಹಾಗೂ ಅರಣ್ಯ ಸಂಪತ್ತನ್ನು ಸ್ವಯಂ ಪ್ರೇರಣೆಯಿಂದ ರಕ್ಷಣೆ ಮಾಡಲು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಟ್ಟು ಬೆಳೆಸಲು ಕೋರಲಾಗಿದೆ.

ಮುಂದುವರೆದು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ವಿಜಯಪುರ ಜಿಲ್ಲೆಯು ರಾಜ್ಯದಲ್ಲಿಯೇ ಅತೀ ಕಡಿಮೆ ಅರಣ್ಯ ಹಾಗೂ ಗಿಡಮರಗಳನ್ನು ಹೊಂದಿರುವ ಪ್ರದೇಶವಾಗಿದೆ. ತಾಲೂಕುಮಟ್ಟದ ನರ್ಸರಿಗಳಲ್ಲಿ ಈಗಾಗಲೇ ವಿವಿಧ ಪ್ರಕಾರದ ಸಸಿಗಳನ್ನು ಬೆಳೆಸಲಾಗಿದ್ದು ಮುಂಬರುವ ಮಳೆಗಾಲದಲ್ಲಿ ರೈತರು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು ಮತ್ತು ಸಾರ್ವಜನಿಕರು ರಿಯಾಯಿತಿ ದರಗಳಲ್ಲಿ ಸಸಿಗಳನ್ನು ಪಡೆದು ತಮ್ಮ ತಮ್ಮ ಜಮೀನುಗಳಲ್ಲಿ ನೆಟ್ಟು ಪಾಲನೆ ಪೋಷಣೆ ಮಾಡುವ ಕ್ರಮಕ್ಕೈಗೊಳ್ಳಲು ಕೋರಿದೆ.

